### ಅರ್ಪಣ

'ಕನ್ನಡದ ಸಿರಿಕಂಠ' 'ಅಪರ್ಣಾ' ಎಂದರೆ ಪಾರ್ವತಿ. ಆ ಜಗಜ್ಜನನಿಯ ಶ್ರೀಕಂಠನ ಅರ್ಧಾಂಗಿಯ ಪದತಲಕ್ಕೆ ಸಿರಿಕಂಠ ಅರ್ಪಣ!

—ಸಿಪಿಕೆ, ಮೈಸೂರು

### ಸ್ಯಾಂಕಿ ಅನುಪಮ ನೆನಪು

'ನಮ್ಮ ಬೆಂಗಳೂರ ಚಂದಗೊಳಿಸಿದ ಎಂಜಿನಿಯರನ ಕತೆ' (ಆ. 01, ಡಾ. ಎಚ್.ಎಸ್. ಅನುಪಮಾ) ಬರಹದಲ್ಲಿ ಸ್ಯಾಂಕಿ ಟ್ಯಾಂಕ್ ನಿರ್ಮಾಣಗೊಳಿಸಿದ ಕಥೆ ಅನುಪಮವಾಗಿ ಮೂಡಿಬಂದಿದೆ. ಈ ಲೇಖನವನ್ನು ಆಳುವವರೂ ಓದಬೇಕು.

—ಛಾಯಾ ಶ್ರೀಧರ್



### ಬೆಂಗಳೂರಿನ ಪರಿಚಯ

ಸ್ಯಾಂಕಿ ಕೆರೆ ಮೊದಲಾಗಿ ಹೈಕೋರ್ಟ್, ಕಬ್ಬನ್ ಪಾರ್ಕ್, ಕೇಂದ್ರ ಗ್ರಂಥಾಲಯ ಇತ್ಯಾದಿ ಬೆಂಗಳೂರಿನ ಐತಿಹಾಸಿಕ ಹಿನ್ನೆಲೆಯುಳ್ಳ ತಾಣಗಳ ಬಗ್ಗೆ ತಿಳಿಸಿಕೊಟ್ಟ ಲೇಖಕಿಗೆ ಧನ್ಯವಾದ. 1950ರಲ್ಲಿ ಧರ್ಮಾಂಬುಧಿ ಕೆರೆ ಏರಿ ಮೇಲೆ ಹಲವು ಸಲ ಓಡಾಡಿದ್ದು ಮನಸ್ಸಿನಲ್ಲಿ ಅಚ್ಚಳಿಯದೆ ಉಳಿದಿದೆ.

—ಲಕ್ಷ್ಮಣ್ ಗೋರ್ಲಕಟ್ಟೆ, ಮೈಸೂರು




### ಹಾಸಿಗೆಯಿದ್ದಷ್ಟು ಕಾಲು ಚಾಚು

'ಮದುವೆ; ಅದ್ದೂರಿಯೊ? ಅರ್ಥಪೂರ್ಣವೊ?' (ಆ. 01, ರಾಘವೇಂದ್ರ ಕೆ. ತೊಗರ್ಸಿ) ಮುಖಪುಟ ಲೇಖನ ತುಂಬಾ ಅರ್ಥಪೂರ್ಣವಾಗಿದೆ. ಆಡಂಬರದ ಮದುವೆಯಿಂದ ಆಗುವ ಅನಾಹುತಗಳು, ಆರ್ಥಿಕ ಶಿಸ್ತನ್ನು ರೂಪಿಸುವ ಸರಳ ಮದುವೆಗಳ ಅಗತ್ಯ ಹಾಗೂ ವಿವಿಧೆಡೆಗಳಲ್ಲಿ ಸರಳ ಮದುವೆಗಳನ್ನು ನಡೆಸುವ ಸಂಘ ಸಂಸ್ಥೆಗಳ ಬಗ್ಗೆ ಸಂಪರ್ಕ ಮಾಹಿತಿ ಮುಂತಾದುವನ್ನು ಒಳಗೊಂಡ ಲೇಖನ ಉಪಯುಕ್ತ.

ತಮ್ಮ ಒಣಪ್ರತಿಷ್ಠೆಗೆ ಆಡಂಬರದ ಮದುವೆ ಮಾಡಿ ಸಾಲದ ಸುಳಿಗೆ ಸಿಕ್ಕಿ ಜೀವನ ಹಾಳುಮಾಡಿಕೊಳ್ಳುವ ಜನರಿರುವ ಈ ಸಂದರ್ಭದಲ್ಲಿ ಇಂತಹ ಲೇಖನಗಳ ಮೂಲಕ ಸರಳ ಮದುವೆಗಳ ಬಗ್ಗೆ ಅರಿವು ಮೂಡಿಸುವ ಅಗತ್ಯ ತುಂಬಾ ಇದೆ.

— ಚಾವಲ್ಮನೆ ಸುರೇಶ್ ನಾಯಕ್, ಚಿಕ್ಕಮಗಳೂರು

### ಅನುಕರಣೀಯ ವಿವಾಹ ಪದ್ಧತಿ

ವಧು ವರರ ಅನ್ಯೋನ್ಯತೆ, ಸಂತಸ ವಿವಾಹದ ರೀತಿಯ ಮೇಲೆ ಅವಲಂಬಿತವಾಗಿರುವುದಿಲ್ಲ. ಆದರೆ ಸಂಪ್ರದಾಯದಲ್ಲಿ ಅನ್ನದಾನಕ್ಕೆ ಮಹತ್ವ ನೀಡಿರುವ ಕಾರಣ ಅತಿಥಿಗಳನ್ನು ಆಹ್ವಾನಿಸುವ ಕ್ರಮವುಂಟು. ಆದರೆ ಇತರರನ್ನು ತೃಪ್ತಿಪಡಿಸಲು, ಘನತೆ ಮೆರೆಯಲು ಸಾಲ ಮಾಡಿ ಅನವಶ್ಯಕ ದುಂದುವೆಚ್ಚ ಸಲ್ಲದು. ಮಂತ್ರ ಮಾಂಗಲ್ಯ, ವಚನ ಮಾಂಗಲ್ಯ ಕ್ರಮ ಅನುಕರಣೀಯ.

—ಮಧು, ಬೆಂಗಳೂರು

### ಮದುವೆಯೂ ಫ್ಯಾಷನ್ ಆಗಿದೆ

ಮುಖೇಶ್ ಅಂಬಾನಿ ಕುಟುಂಬದ ಈಚಿನ ಅದ್ದೂರಿ ಮದುವೆ, ಇಡೀ ಜಗತ್ತು ಭಾರತದ ಕಡೆಗೆ ನೋಡುವಂತೆ ಮಾಡಿದೆ.

ನನ್ನ ಅಣ್ಣನ ಮಗನ ಮದುವೆ ಸಾಗರದ ಬಳಿಯ ಹೊನ್ನೇಮರಡು ಕಾನನದ ಪ್ರಕೃತಿ ಮಧ್ಯೆ 'ಮಂತ್ರ ಮಾಂಗಲ್ಯ'ದ ಮೂಲಕ ನಡೆದದ್ದು ನೆನಪಾಯಿತು. ಈಚಿನ ದಿನಗಳಲ್ಲಿ ಅದ್ದೂರಿ ಆರತಕ್ಷತೆ/ಊಟದಲ್ಲಿ ವಿಚಿತ್ರ ಭಕ್ಷ್ಯಗಳನ್ನು ಮಾಡಿಸುವುದು ಫ್ಯಾಷನ್ ಆಗಿಬಿಟ್ಟಿದೆ. 'ಹಾಸಿಗೆ ಇದ್ದಷ್ಟು ಕಾಲು ಚಾಚು' ಎಂಬ ನಾಣ್ಣುಡಿಯಂತೆ ಮದುವೆಯೂ ತಮ್ಮ ಆರ್ಥಿಕತೆಗೆ ತಕ್ಕಂತೆ ಇದ್ದರೆ ಸೂಕ್ತ.

—ಕಮಲಾದೇವಿ ರಾಜಶೇಖರ ಹಳ್ಳೂರ್, ಬೆಂಗಳೂರು

### ಮನದಲ್ಲಿ ನೆಲೆ ನಿಲ್ಲುವ ಲೇಖನ

'ರಾಮಾನುಜನ್–ಜಾನಕಿ ಅಪೂರ್ಣ ಪ್ರೇಮಕಥೆ' (ಆ. 01, ಸಿದ್ದಿ ಶ್ರೀನಿವಾಸ್) ಓದಿ ಪ್ರಖ್ಯಾತ ಗಣಿತಜ್ಞ, ಮಹಾನ್ ಮೇಧಾವಿ ಬದುಕನ್ನು ಕಟ್ಟಿಕೊಳ್ಳಲು ಸೋತು ಹೋದದ್ದು ನೋವು ತಂದಿತು. ಯೌವನದಲ್ಲಿ ಅಸಹಾಯಕಳಾಗಿ ಗಂಡನ ಜೊತೆಗೆ ಬದುಕಲಾಗದಿದ್ದರೂ ಗಂಡನ ಆಗಮನವನ್ನು ವೃತ್ತಪತ್ರಿಕೆಯಿಂದ ತಿಳಿದು ಬಂದು ಸಾವಿನಂಚಿನಲ್ಲಿ ಸಾಂತ್ವನ, ಸಾಂಗತ್ಯ ನೀಡಿ ಅವರ ಮರಣಾನಂತರ ದತ್ತು ಪಡೆದು, ಮಗನನ್ನು ಸಾಕಿದ ಜಾನಕಿಯವರ ಮೇರು ವ್ಯಕ್ತಿತ್ವ ಭಾರತೀಯ ಪಾರಂಪರಿಕ ಮೌಲ್ಯದ ಹಿರಿಮೆ ನೆನಪಿಸಿತು. ತಂದೆಯವರಿಗೆ ಸಂಬಂಧಿಸಿದ ವಸ್ತುಗಳನ್ನು ಜೋಪಾನವಾಗಿ ಕಾಪಾಡಿಕೊಂಡಿರುವ ಮಗ ನಾರಾಯಣ್ ಅವರ ಬಗ್ಗೆಯೂ ಮೆಚ್ಚುಗೆ ಮೂಡಿತು. ಮನದಲ್ಲಿ ನೆಲೆ ನಿಲ್ಲುವ ಲೇಖನ.



—ವಿನು ಗಂಗೆ

### ಜಾನಕಿ ಅವರ ಶ್ರೇಷ್ಠತೆ!

ರಾಮಾನುಜನ್ ಅವರ ದಾಂಪತ್ಯ ಜೀವನದ ಬಗ್ಗೆ ಓದಿ ಬೇಸರವಾಯಿತು. ಅವರ ತಾಯಿಯೇ ಈ ದುರಂತಕ್ಕೆ ಕಾರಣವಾದದ್ದು ಖೇದದ ಸಂಗತಿ. ಮಹಾನ್ ವಿಜ್ಞಾನಿಗೆ ಸೂಕ್ತ ಸಹಕಾರ ಇದ್ದಿದ್ದರೆ ಅವರ ಕೊಡುಗೆ ಇನ್ನೂ ದೊರಕುತ್ತಿತ್ತು. ಜಾನಕಿ ಅವರನ್ನು ಪ್ರಶಂಸಿಸಲೇಬೇಕು.

—ಮಹಾಲಿಂಗಪ್ಪ ಗೋ. ಹುಲಕುಂದ, ಬೆಂಗಳೂರು

### ಮೇಧಾವಿಯ ಅಪೂರ್ಣ ಬದುಕು

'ವಿಜ್ಞಾನಿಗಳ ದಾಂಪತ್ಯ ಮಾಲಿಕೆ'ಯಲ್ಲಿ ರಾಮಾನುಜನ್ ಅವರ ಕಥೆ ಓದಿ ಬೇಸರವಾಯಿತು. ವಿಶ್ವಶ್ರೇಷ್ಠ ಗಣಿತಜ್ಞನಾದರೂ ದಾಂಪತ್ಯದ ಸವಿ ಅನುಭವಿಸದಿರುವುದು ಶೋಚನೀಯ. ರಾಮಾನುಜನ್ ತಾಯಿ ಕೋಮಲತಾ ತಮ್ಮ ಇಷ್ಟದಂತೆಯೇ ಅನೇಕ ಅಪಸವ್ಯಗಳ ಮಧ್ಯೆ ಜಾನಕಿಯನ್ನು ಮದುವೆ ಮಾಡಿಸಿದ್ದರೂ ಮಾತೃಹೃದಯ ಶೂನ್ಯವಾಗಿ ಮಗನ ಹಿತ ಮತ್ತು ಏಳಿಗೆಗೆ ಬೆಂಬಲ ನೀಡದೆ ಶ್ರೇಷ್ಠ ಮಹಾನ್ ಗಣಿತ ಮೇಧಾವಿಯ ಅಕಾಲ ಮರಣಕ್ಕೆ ತುತ್ತಾಗಿದ್ದು ಎಂಥವರಿಗೂ ಮನಸ್ಸು ನೋಯಿಸುತ್ತದೆ.

— ಕೆ.ಎಸ್. ಪ್ರಭಾಕರ ಗುಪ್ತ, ಹಾಸನ

### ಅದ್ಭುತ ಧಾಟಿ



'ಬಾಲ್ಯದ ಆಟಕೆ ಹಿಪ್ಪೆಯ ನಂಟು' (ಆ. 01, ವಿನು ಗಂಗೆ), ಹಿಪ್ಪೆ ಮರದ ಬಗ್ಗೆ ಉಪಯುಕ್ತ ಮಾಹಿತಿಯ ಅದ್ಭುತ ಲೇಖನ. ವೃಕ್ಷಗಳ ಬಗೆಗಿನ ಲೇಖಕಿಯ ಜ್ಞಾನ ಪ್ರಬುದ್ಧ. ವಿವರಣೆಯ ಧಾಟಿಯಂತೂ ಅತ್ಯದ್ಭುತ. ಅವರು ತಿಳಿಸಿರುವ ಎಷ್ಟೊಂದು ಮರ ಗಿಡಗಳನ್ನು ನಾವು ನೋಡಿಯೇ ಇಲ್ಲ. 'ಮರಗಳ ಕಥೆ'ಯನ್ನು ನಿರೀಕ್ಷೆ ಮಾಡುತ್ತಿರುವ ಹಲವಾರು ಓದುಗರಲ್ಲಿ ನಾನೂ ಒಬ್ಬಳು.

—ವೀಣಾ ಆರ್., ಬೆಂಗಳೂರು

**ಪ್ರತಿಕ್ರಿಯಿಸಿ** ರಚನಾತ್ಮಕ ಟೀಕೆ–ಟಿಪ್ಪಣಿಗಳಿಗೆ ಸ್ವಾಗತ. ಪ್ರತಿಕ್ರಿಯೆ ಚುಟುಕು, ಚುರುಕಾಗಿರಲಿ. ಇ–ಮೇಲ್: feedback@sudha.co.in